**ಸಿವಿಲ್ ನಾಯಾಧೀಶರು ಮತ್ತು ಪ್ರಧನ್ಯಾಯದಂಡಾಧಿಕಾರಿಗಳವರ ನ್ಯಾಯಾಲಯ, ಪೊನ್ನಂಪೇಟೆ**

**ಸಿ.ಸಿ.ನಂ.251/2023**

ಪಿರ್ಯಾದಿ : ಸರ್ಕಾರ, ಅಬಕಾರಿ ನಿರೀಕ್ಷಕರು,
ವಿರಾಜಪೇಟೆ ವಲಯ, ವಿರಾಜಪೇಟೆ,

ವಿರುದ್ಧ

ಆರೋಪಿ : ಜೆ.ಆರ್.ಗಣಪತಿ,

ದೋಷಾರೋಪಣೆ

ಶ್ರೀಮತಿ ಆಶಾ ಕೆ.ಎಸ್., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿಯಾದ ನಾನು ಆರೋಪಿಯಾದ:

ಜೆ.ಆರ್.ಗಣಪತಿ,
ತಂದೆ: ಪೌತಿ ರಾಜಾ,
ಪ್ರಾಯ: 43 ವರ್ಷ,
ವಾಸ: ಕಾನೂರು ಗ್ರಾಮ,
ಪೊನ್ನಂಪೇಟೆ, ಕೊಡಗು.

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ:

ದಿನಾಂಕ 11.08.2022 ರಂದು ಸಮಯ ಸಂಜೆ 4.15 ಗಂಟೆಯ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು ತಮ್ಮ ಸಿಬ್ಬಂದಿಗಳೊಂದಿಗೆ ಕಾನೂರು ಗ್ರಾಮದಲ್ಲಿ ಅಬಕಾರಿ ಗಸ್ತು ನಡೆಸುತ್ತಿದ್ದ ಸಮಯದಲ್ಲಿ ಬಾತ್ಮಿದಾರರಿಂದ ಬಂದ ವರ್ತಮಾನದಂತೆ ಕಾನೂರು ಗ್ರಾಮದ ಮಲ್ಲಂಗೇರಿ ಪೈಸಾರಿ ನಿವಾಸಿಯಾದ ಜೆ.ಆರ.ಗಣಪತಿ ಎಂಬುವವರು ತಮ್ಮ ವಾಸದ ಮನೆಯಲ್ಲಿ ಅಕ್ರಮವಾಗಿ ಮದ್ಯ ಶೇಖರಣೆ ಮಾಡಿ ಮಾರಾಟ ಮಾಡುತ್ತಿರುವುದಾಗಿ ಬಂದ ಖಚಿತ ಮಾಹಿತಿ ಆಧಾರದ ಮೇರೆಗೆ, ಸದರಿ ಗ್ರಾಮಕ್ಕೆ ತೆರಳಿ ಪಂಚರ ಸಮಕ್ಷಮ ಆರೋಪಿಯಾದ ತಮ್ಮ ಮನೆಯನ್ನು ಶೋಧನೆ ಮಾಡಲಾಗಿ, ಸದರಿ ಮನೆಯ ಮಂಚದ ಕೆಳಗಡೆ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಮಿ.ಲಿಯ 68 ಒರಿಜಿನಲ್ ಚಾಯ್ಸ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್‌ಗಳು ಒಟ್ಟು ಒಟ್ಟು 6.120 ಲಿ.ನಷ್ಟು ಮಧ್ಯವನ್ನು ಅಕ್ರಮವಾಗಿ ಸರ್ಕಾರದ ಯಾವುದೇ ರಹದಾರಿಯನ್ನು ಪಡೆಯದೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿಟ್ಟಿದ್ದು, ಆ ಮೂಲಕ ನಿಮ್ಮ ವಿರುದ್ಧ ಕರ್ನಾಟಕ ಅಬಕಾರಿ ಕಾಯಿದೆ ಕಲಂ 14, 15, 32 ರಡಿಯಲ್ಲಿ ಶಿಕ್ಷಾರ್ಹವಾದ ಅಪಾಧನೆ ಇದೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

6/12/23

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂ, ಪೊನ್ನಂಪೇಟೆ,

ದಿನಾಂಕ: 06.12.2023
ಸ್ಥಳ: ಪೊನ್ನಂಪೇಟೆ.

ಗಣಪತಿ

Scanned with CamScanner